# ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸಮಗ್ರ ಪೌಷ್ಠಿಕತೆ ಅಭಿಯಾನದಡಿ ಪ್ರಾಯೋಗಿಕ ಕಾರ್ಯಕ್ರಮಗಳ ಅನುಷ್ಠಾನ ಕುರಿತು ನಡೆದ ಉನ್ನತ ಮಟ್ಟದ ಸಮಿತಿ 2ನೇ ಸಭೆಯ ನಡವಳಿಗಳು

ದಿನಾಂಕ: 29-4-2015 ರಂದು ಸಂಜೆ 5 ಗಂಟೆಗೆ

ಸ್ಥಳ: ಸಮಿತಿ ಕೊಠಡಿ ಸಂಖ್ಯೆ: 313, ವಿಧಾನ ಸೌಧ, ಬೆಂಗಳೂರು.

ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು/ಅಧಿಕಾರಿಗಳು/ಆಹ್ವಾನಿತರು

1. ಸನ್ಮಾನ್ಯ ಶ್ರೀ ಹೆಚ್.ಕೆ. ಪಾಟೀಲ್, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಕರ್ನಾಟಕ ಸರ್ಕಾರ – ಸಭಾಧ್ಯಕ್ಷರು
2. ಸನ್ಮಾನ್ಯ ಶ್ರೀಮತಿ ಉಮಾಶ್ರೀ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ– ಸದಸ್ಯರು
3. ಶ್ರೀಮತಿ ಲತಾ ಕೃಷ್ಣರಾವ್ ಜಿ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು-ಸದಸ್ಯರು, ವಿಧಾನ ಸೌಧ, ಬೆಂಗಳೂರು
4. ಶ್ರೀಮತಿ ವೀಣಾ ಎಸ್. ರಾವ್, ಸಲಹೆಗಾರರು, ಕರ್ನಾಟಕ ಸಮಗ್ರ ಪೌಷ್ಠಿಕತೆ ಅಭಿಯಾನ
5. ಶ್ರೀ ಡಿ.ವಿ. ಸ್ವಾಮಿ, ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್.
6. ಶ್ರೀ ಬಿ.ಎನ್. ವರಪ್ರಸಾದ ರೆಡ್ಡಿ, ಅಪರ ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್.
7. ಶ್ರೀ ಹೆಚ್.ಜಿ ಚಂದ್ರಶೇಖರಯ್ಯ, ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
8. ಶ್ರೀ ಕೆ.ಹೆಚ್ ಓಬಳಪ್ಪ, ಜಂಟಿ ನಿರ್ದೇಶಕರು(ಐಸಿಡಿಎಸ್), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

(ಶ್ರೀ ಠಕುಮ ಹಿಸನಗ, ಪ್ರಥಮ ಕಾರ್ಯದರ್ಶಿ, ಹಣಕಾಸು ವಿಭಾಗ, ಜಪಾನ್ ರಾಯಭಾರಿ ಕಚೇರಿ, ದೆಹಲಿ ಇವರು ಅನಿವಾರ್ಯ ಕಾರಣ ಸಭೆಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದರು)

1. ಪ್ರಾರಂಭದಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯ ಅಭಿಯಾನ ನಿರ್ದೇಶಕರು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಸರ್ಕಾರದ ಕಾರ್ಯದ ನಿಮಿತ್ತ ದೆಹಲಿಗೆ ಹೋಗಿರುವುದರಿಂದ ಅವರ ಪರವಾಗಿ ಸಮಿತಿಯ ಸದಸ್ಯರುಗಳನ್ನು ಸ್ವಾಗತಿಸುತ್ತಾ, ಕರ್ನಾಟಕ ಮಲ್ಟಿ-ಸೆಕ್ಟೊರಲ್ ಪೌಷ್ಠಿಕತಾ ಪ್ರಾಯೋಗಿಕ ಯೋಜನೆಯ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಮತ್ತು ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್ ಯೊಂದಿಗೆ ಒಪ್ಪಂದದ ಅನುಮೋದನೆ ಕುರಿತು ಉನ್ನತ ಮಟ್ಟದ ಸಮಿತಿ 2ನೆ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರನ್ನು ಆಹ್ವಾನಿಸಿ ಸಭೆಯನ್ನು ನಡೆಸಿ ಕೊಡಲು ಕೋರಿದರು. ಅಭಿಯಾನ ನಿರ್ದೇಶಕರು ಈ ಯೋಜನೆಯ ಬಗ್ಗೆ ಮಾನ್ಯ ಸಚಿವರವರಿಗೆ ವಿವರಿಸುತ್ತಾ, ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳಾದ

ದೇವದುರ್ಗ ಮತ್ತು ಚಿಂಚೋಳಿ ತಾಲ್ಲೂಕುಗಳಲ್ಲಿ ಇರುವ ತುಂಬಾ ದುರ್ಬಲ ಬೆಳವಣಿಗೆಯುಳ್ಳ ಮಕ್ಕಳ ಅಂದರೆ 6 ತಿಂಗಳಿಂದ 3 ವರ್ಷದವರೆಗಿನ ಮಕ್ಕಳಿಗೆ, ಕಿಶೋರಿಯರಿಗೆ (11–18 ವರ್ಷ) ಹಾಗೂ ಗರ್ಭಿಣಿಯರು ಮತ್ತು ಬಾಣಂತಿಯರು(ಹಾಲೂಣಿಸುವ ತಾಯಂದಿರು) ವರ್ಗಗಳಲ್ಲಿ ಅಪೌಷ್ಠಿಕತೆ ಪ್ರಮಾಣವನ್ನು ಕಡಿಮೆ ಮಾಡಲು, ಆ ಮೂಲಕ ಮಕ್ಕಳ ಹಾಗೂ ತಾಯಂದಿರ ಮರಣ ಪ್ರಮಾಣವನ್ನು ತಗ್ಗಿಸಲು ಸಾಧ್ಯವಾಗುವ ಬಗ್ಗೆ ವಿವರಿಸಿದರು.

2. ಉನ್ನತ ಮಟ್ಟದ ಸಮಿತಿ 1ನೇ ಸಭೆಯ ನಡುವಳಿಗಳನ್ನು ಸಭೆಗೆ ಓದಿ ತಿಳಿಸಿ, ಒಪ್ಪಿಗೆಯನ್ನು ಪಡೆಯಲಾಯಿತು.

3. ಅಭಿಯಾನ ನಿರ್ದೇಶಕರು ದಿನಾಂಕ: 6.12.2014 ರಂದು ನಡೆದ ಉನ್ನತ ಮಟ್ಟದ ಸಮಿತಿ ಮೊದಲನೇ ಸಭೆಯ ನಡುವಳಿಗಳ ಮೇಲೆ ತೆಗೆದು ಕೊಂಡ ಕ್ರಮಗಳ ಬಗ್ಗೆ ಈ ಕೆಳಕಂಡಂತೆ ಮಾಹಿತಿ ನೀಡಿದರು.

ಅ) **ಯೋಜನಾ ಮೇಲ್ವಿಚಾರಣ ಘಟಕ:** ಯೋಜನಾ ಮೇಲ್ವಿಚಾರಣ ಘಟಕದಡಿಯಲ್ಲಿ ಹುದ್ದೆಗಳ ನೇಮಕವಾಗಿದ್ದು, ಅದರಲ್ಲಿ ಯೋಜನಾ ನಿರ್ವಹಣಾ ಸಮಾಲೋಚಕ ಮತ್ತು ಲೆಕ್ಕ ಸಹಾಯಕ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಮತ್ತು ಕರ್ತವ್ಯದಲ್ಲಿದ್ದಾರೆ. ಉಳಿದ ಇನ್ನೊಬ್ಬ ಸಮಾಲೋಚಕರನ್ನು ಮತ್ತು ಎರಡು ಸಹಾಯಕರ ಹುದ್ದೆಗಳನ್ನು ಮುಂದಿನ ಒಂದು ತಿಂಗಳಲ್ಲಿ ತುಂಬಲಾಗುವುದು.

ಆ) **ವಿಶ್ವಬ್ಯಾಂಕ್‌ನಿಂದ ಅನುದಾನ ಬಿಡುಗಡೆ:** ಕರ್ನಾಟಕ ಮಲ್ಟಿ–ಸೆಕ್ಟೋರಲ್ ಪೌಷ್ಠಿಕ ಪ್ರಾಯೋಗಿಕ ಯೋಜನೆಯ ಅನುಷ್ಠಾನಕ್ಕಾಗಿ ವಿಶ್ವಬ್ಯಾಂಕ್‌ನಿಂದ 2 ತ್ರೈಮಾಸಿಕ ಅವಧಿಯ ವೆಚ್ಚಕ್ಕಾಗಿ ಮುಂಗಡ ಅನುದಾನ ರೂ.3.27 ಕೋಟಿಗಳನ್ನು ಕರ್ನಾಟಕ ಸರ್ಕಾರದ ಖಜಾನೆಗೆ ದಿನಾಂಕ 03–09–2014 ಬಿಡುಗಡೆಗೊಳಿಸಲಾಯಿತು. ದಿನಾಂಕ: 11–02–2015 ರಂದು ಯೋಜನೆಯ ಬ್ಯಾಂಕ್ ಖಾತೆಗೆ ಹಣವನ್ನು ವರ್ಗಾಯಿಸಲಾಯಿತು.

ಇ) **ಸರ್ಕಾರೇತರ ಸಂಸ್ಥೆಯ ಆಯ್ಕೆ:** ವಿಶ್ವಬ್ಯಾಂಕಿನ ಮಾರ್ಗಸೂಚಿಗಳು ಮತ್ತು ನಿಯಮಾನುಸಾರ, ಚಿಂಚೋಳಿ ಮತ್ತು ದೇವದುರ್ಗ ತಾಲ್ಲೂಕುಗಳಲ್ಲಿ ಪ್ರಾಯೋಗಿಕ ಯೋಜನೆಯನ್ನು ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯೊಂದಿಗೆ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲು, ಸರ್ಕಾರೇತರ ಸಂಸ್ಥೆಯಾದ ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್ ಸಂಸ್ಥೆಯನ್ನು ಆಯ್ಕೆ ಮಾಡಲಾಯಿತು. ಈ ಸಂಬಂಧ ಸರ್ಕಾರೇತರ ಸಂಸ್ಥೆಯ ಆಯ್ಕೆ ಮತ್ತು ಮೂರು ವರ್ಷದ ಅವಧಿಯ ಕರಾರಿನ ಮೊತ್ತ ರೂ.220,428,577/–ಗೆ ವಿಶ್ವಬ್ಯಾಂಕ್ ದಿನಾಂಕ 23–12–2014 ರಂದು ಅನುಮೋದನೆ ನೀಡಿತು

ಈ) **ಸಹಗಾಮಿ ಮೇಲ್ವಿಚಾರಣೆ ಸಂಸ್ಥೆ:** ವಿಶ್ವ ಬ್ಯಾಂಕಿನ ಮಾರ್ಗಸೂಚಿಗಳು ಮತ್ತು ನಿಯಮಾನುಸಾರ 6 ಸರ್ಕಾರೇತರ ಸಂಸ್ಥೆಗಳನ್ನು Short list ಮಾಡಲಾಗಿದ್ದು, ಈ ಸಂಸ್ಥೆಗಳಿಗೆ ದಿನಾಂಕ: 15–04–2015ರಂದು RFP (Request for proposal) ಯನ್ನು ಕಳುಹಿಸಲಾಗಿದೆ. ಪ್ರಸ್ತಾವನೆಯನ್ನು ಸಲ್ಲಿಸಲು ದಿನಾಂಕ 15–05–2015 ಅಂತಿಮ ದಿನವಾಗಿ ನಿಗಧಿ ಪಡಿಸಲಾಯಿತು.

ಉ) **ಬಹುಮಾಧ್ಯಮ ಸಂಸ್ಥೆ ಆಯ್ಕೆ:** ವಿಶ್ವಬ್ಯಾಂಕಿನ ಮಾರ್ಗಸೂಚಿಗಳು ಮತ್ತು ನಿಯಮಗಳ ಪ್ರಕಾರ ಬಹುಮಾಧ್ಯಮ ಸಂಸ್ಥೆಗಳ Short listing ಪ್ರಕ್ರಿಯೆ ಪ್ರಗತಿಯಲ್ಲಿದೆ ಹಾಗೂ ಮುಂದಿನ ವಾರದೊಳಗಾಗಿ ಆಯ್ಕೆ ಪ್ರಕ್ರಿಯೆಯನ್ನು ಅಂತಿಮಗೊಳಿಸಲಾಗುವುದು.

4. ಕರ್ನಾಟಕ ಸಮಗ್ರ ಪೌಷ್ಠಿಕತೆ ಅಭಿಯಾನದ ಸಲಹೆಗಾರರು, ಈ ಪ್ರಾಯೋಗಿಕ ಯೋಜನೆಯ ಹಿನ್ನಲೆ, ಅಪೌಷ್ಠಿಕಗೆ ಕಾರಣವಾಗುವ ಮೂಲಭೂತ ಕಾರಣಗಳನ್ನು ಪತ್ತೆಹಚ್ಚುವ ವಿಶೇಷ ಮತ್ತು ಇಂಟರ್-ಸೆಕ್ಟೋರಲ್ ಗುಣಲಕ್ಷಣಗಳು, ಯಾವ ರೀತಿ ಕಾರ್ಯ ಚಟುವಟಿಕೆಗಳನ್ನು ಹಮ್ಮಿ ಕೊಳ್ಳಲಾಗಿದೆ ಎಂಬುದನ್ನು ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಈ ಕೆಳಕಂಡ ಅಂಶಗಳನ್ನು ಸಮಿತಿಗೆ ವಿವರಿಸಿದರು.

- ಶೇ 50% ರಷ್ಟು ಜನಸಂಖ್ಯೆಯಲ್ಲಿ ಕಂಡು ಬರುವ ಕ್ಯಾಲೋರಿ-ಪ್ರೋಟಿನ್-ಸೂಕ್ಷ್ಮ ಪೋಷಕಾಂಶಗಳ ಕೊರತೆಯನ್ನು ಪೂರಕ ಆಹಾರವನ್ನು ಪೂರೈಸುವುದರ ಮೂಲಕ ನಿವಾರಿಸುವುದು.
- ಮಕ್ಕಳು, ಹದಿಹರೆಯದ ಹೆಣ್ಣುಮಕ್ಕಳು, ಗರ್ಭಿಣಿ ಮತ್ತು ಬಾಣಂತಿಯರ ಪೌಷ್ಠಿಕ ಅಗತ್ಯಗಳ ಉದ್ದೇಶಗಳನ್ನು ಅಂತರ್ ಪೀಳಿಗೆಯ ಜೀವನ ಚಕ್ರದ ವಿಧಾನದಲ್ಲಿ ಅಳವಡಿಸಲಾಗುವುದು.
- ಅಪೌಷ್ಠಿಕತೆಯ ನಿವಾರಣಾ ಸಂಬಂಧ ಪ್ರಸ್ತುತ ಅನುಷ್ಠಾನದಲ್ಲಿರುವ ವಿವಿಧ ಇಲಾಖೆಗಳ ಕಾರ್ಯಕ್ರಮಗಳನ್ನು ಸಂಯೋಜಿಸಿ, ವಿಶೇಷವಾಗಿ ಆರೋಗ್ಯ, ಸಮಗ್ರ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ, ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಗಳನ್ನು ಒಮ್ಮೆಲೆ ಅನುಷ್ಠಾನಗೊಳಿಸುವುದರ ಮೂಲಕ ಕಾರ್ಯಕ್ರಮಗಳ ಅಂತರಗಳನ್ನು ಕಡಿಮೆಗೊಳಿಸಿ ನಿರಂತರತೆ ಕಾಯ್ದುಕೊಳ್ಳುವುದು.
- ಶಿಕ್ಷಣ, ಮಾಹಿತಿ ಮತ್ತು ಸಂಪರ್ಕ ಮಾರ್ಗಗಳ ಮೂಲಕ ವಿವಿಧ ಉಪಯುಕ್ತ ಮಾಹಿತಿಗಳನ್ನು ನಿರಂತರವಾಗಿ ಸಾರ್ವಜನಿಕರಿಗೆ ಅದರಲ್ಲೂ ಬೇರು ಮಟ್ಟದಲ್ಲಿರುವವರ ಗಮನಕ್ಕೆ ತರುವಂತೆ ಮಾಡಿ, ಸಮಗ್ರ ಪೌಷ್ಠಕತೆಯ ಅವಶ್ಯಕತೆ ಹೆಚ್ಚಿಸಿಕೊಳ್ಳುವ ರೀತಿ ಅವರ ಜೀವನ ಶೈಲಿ ರೀತಿ ನೀತಿಗಳನ್ನು ಬದಲಾಯಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸುವ ಕಾರ್ಯಗಳನ್ನು ಹಮ್ಮಿ ಕೊಂಡಿರುವುದನ್ನು ಸಭೆಗೆ ತಿಳಿಸಿದರು.
- ಸಮುದಾಯ ಮೇಲ್ವಿಚಾರಣೆಯಲ್ಲಿ ವಾಸ್ತವ ಸ್ಥಿತಿಗತಿ ತಿಳಿಯಲು ಕಾರ್ಯತಂತ್ರಗಳನ್ನು ನಿರ್ಮಿಸುವುದು ಮತ್ತು ಮೂರನೇ ಸಂಸ್ಥೆಯಿಂದ ಮೌಲ್ಯಮಾಪನ ಮಾಡಿಸುವುದು.

5. ಸಲಹೆಗಾರರು ಸಭೆಗೆ ಮಾಹಿತಿ ನೀಡುತ್ತಾ ಈ ಅಭಿಯಾನದಡಿಯಲ್ಲಿ ಪ್ರಾಯೋಗಿಕವಾಗಿ ಗುಬ್ಬಿ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿ ಯಶಸ್ವಿಯಾಗಿ ಮತ್ತು ಉತ್ತಮ ಫಲಿತಾಂಶಗಳು ನಿಗಧಿತ ಸಮಯದಲ್ಲಿ ದೊರೆತಿರುವುದರಿಂದ ಸದರಿ ಯೋಜನೆಯ ಅನುಷ್ಠಾನಕ್ಕೆ ವಿಶ್ವಬ್ಯಾಂಕ್‌ನಿಂದ US $ 5 ಮಿಲಿಯನ್ ಅನುದಾನವನ್ನು ಕರ್ನಾಟಕ ಸರ್ಕಾರಕ್ಕೆ ನೀಡಲಾಗಿದೆ.

6. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಈ ಕೆಳಕಂಡ ಪ್ರಶ್ನೆಗಳನ್ನು ಕೇಳುವುದರ ಮೂಲಕ ಚರ್ಚೆಯನ್ನು ಆರಂಭಿಸಿದರು:

- ಜನಗಳ ಆಹಾರ ಪದ್ಧತಿಯಲ್ಲಿ ಕ್ಯಾಲೋರಿ-ಪ್ರೋಟಿನ್-ಸೂಕ್ಷ್ಮ ಪೋಷಕಾಂಶಗಳ ಕೊರತೆಯನ್ನು ನಿವಾರಿಸಲು ಯಾವ ಕ್ರಮ ತೆಗೆದು ಕೊಂಡಿದ್ದೀರಿ ಮತ್ತು ಈ ಸಮಸ್ಯೆಗೆ ಪರಿಹಾರ ಏಕೆ ಸಿಕ್ಕಿಲ್ಲ.
- ಈ ಯೋಜನೆಯಲ್ಲಿ ಕೇವಲ ಮಹಿಳೆಯರನ್ನು ಮತ್ತು ಮಕ್ಕಳನ್ನು ಮಾತ್ರ ಏಕೆ ಆಯ್ಕೆ ಮಾಡಲಾಗಿದೆ. ಪುರುಷರಲ್ಲೂ ಕೂಡ ಅಪೌಷ್ಟಿಕತೆಯ ತೊಂದರೆ ಇದೆ ಎಂದರು.
- ಸೂಕ್ಷ್ಮ ಪೋಷಕಾಂಶಗಳ ಕೊರತೆ ಮತ್ತು ಅಪೌಷ್ಟಿಕತೆಯಿಂದ ಬಳಲುತ್ತಿರುವವರ ಸಂಖ್ಯೆ, ಬಡತನ ರೇಖೆಗಿಂತ ಕಡೆಮೆಯಿರುವ ವರ್ಗದವರಲ್ಲಿನ ಸಂಖ್ಯೆಗಿಂತ ಹೆಚ್ಚು ಕಂಡು ಬರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಪರಿಹಾರಗಳನ್ನು ಕಂಡು ಕೊಳ್ಳಲು ಯಾವ ಕ್ರಮ ತೆಗೆದುಕೊಳ್ಳ ಬಹುದು?

7. ಸಲಹೆಗಾರರು ಮಾಹಿತಿ ನೀಡುತ್ತಾ ಕುಟುಂಬ ಮತ್ತು ಸಮಾಜದಲ್ಲಿ ಮಹಿಳೆಯರ ಸ್ಥಿತಿಗತಿ ತುಂಬಾ ಶೋಚನೀಯವಾಗಿದ್ದು, ಲಿಂಗ ತಾರತಮ್ಯ, ಚಿಕ್ಕ ವಯಸ್ಸಿನಲ್ಲಿ ಮದುವೆ, ಚಿಕ್ಕ ವಯಸ್ಸಿನಲ್ಲಿ ಗರ್ಭಿಣಿಯಾಗುವುದು ಕಂಡು ಬರುತ್ತದೆ. ಈ ಯೋಜನೆಯಲ್ಲಿ ಮೊದಲ ಆದ್ಯತೆಯನ್ನು ಅಪೌಷ್ಟಿಕತೆಯನ್ನು ಕಡಿಮೆ ಮಾಡುವುದು ಎಂದು ತಿಳಿಸಿದರು. ಜೀವನ ಚಕ್ರದ ವಿಧಾನದಲ್ಲಿ ಮಕ್ಕಳು, ಕಿಶೋರಿಯರು, ಬಾಣಂತಿಯರು, ಹಾಲುಣಿಸುವ ತಾಯಂದಿರಿಗೆ ಮುಖ್ಯ ನಿರ್ದಿಷ್ಟ ಗುಂಪುಗಳಿಗೆ ಕಾರ್ಯನಿರ್ವಹಿಸುವುದು. ಮಾನ್ಯ ಸಚಿವರು ಪ್ರಶ್ನಿಸುತ್ತಾ ಅಪೌಷ್ಟಿಕತೆಯು ಹುಡುಗರಲ್ಲಿ ಮತ್ತು ಪುರುಷರಲ್ಲಿ ತುಂಬಾ ಗಂಭೀರವಾಗಿ ಕಂಡು ಬಂದಿದ್ದು, ಇದು ಭಾರತದ ಜನಸಂಖ್ಯೆಯ ಪ್ರಮುಖ ಸಂಗತಿಯಾಗಿದೆ.ಎನ್.ಎಫ್.ಹೆಚ್.ಎಸ್-3 ವರದಿಯ ಪ್ರಕಾರ ಕರ್ನಾಟಕದಲ್ಲಿ ಪುರುಷರಲ್ಲಿ ಅಪೌಷ್ಟಿಕತೆ, ಮತ್ತು Low Body Mass Index/ ಪೋಷಕಾಂಶಗಳ ಕೊರತೆ(33.9%), ಮತ್ತು ಅನೀಮಿಯ (19.1%) ಇರುತ್ತದೆ ಹಾಗೂ ಈ ಕೊರತೆಯಿಂದಾಗಿ ಪುರುಷರ ಕೆಲಸ ಮಾಡುವ ಸಾಮರ್ಥ್ಯ ಕುಂಠಿತಗೊಂಡು ಮತ್ತು ಬಡತನಕ್ಕೆ ದಾರಿ ಮಾಡಿಕೊಡುತ್ತದೆ ಇದು ತುಂಬಾ ಗಂಭೀರವಾದ ಸಮಸ್ಯೆ ಇದಕ್ಕೆ ಸಂಬಂಧಿಸಿದಂತೆ ಯೋಜನೆಯು ಉತ್ತರವನ್ನು ಕಂಡು ಕೊಳ್ಳಬೇಕಾಗಿದೆ ಎಂದು ತಿಳಿಸಿದರು. ಸಲಹೆಗಾರರು ಮಾಹಿತಿ ನೀಡುತ್ತಾ ರಾಷ್ಟ್ರೀಯ ಪೌಷ್ಟಿಕ ಮೇಲ್ವಿಚಾರಣಾ ಸಂಸ್ಥೆ ಮೂರನೇ ಮರು ಸಮೀಕ್ಷಾ 2012 ತಾಂತ್ರಿಕ ವರದಿ 26ರಲ್ಲಿ ನಡೆಸಿದ ಸಮೀಕ್ಷೆಯು ಕರ್ನಾಟಕವು ಸೇರಿ 8 ರಾಜ್ಯಗಳಲ್ಲಿ ನಡೆಯಿತು. ಈ ವರದಿ ಪ್ರಕಾರ ಎಲ್ಲಾ ವರ್ಗದ ಪುರುಷ ಮತ್ತು ಮಹಿಳೆಯರ ಗುಂಪುಗಳಲ್ಲಿ ಆಹಾರ ಮತ್ತು ಪೌಷ್ಟಿಕತೆ ತೆಗೆದುಕೊಳ್ಳುವ ಆರ್.ಡಿ.ಎ. (Recommended Daily Allowance) ಎನ್.ಎನ್.ಎಮ್.ಬಿ. ತಾಂತ್ರಿಕ ವರದಿ ಸಂಖ್ಯೆ 21 ರಲ್ಲಿ ಸೂಚಿಸಿದಂತೆ ಹುಡುಗಿಯರಿಗಿಂತ 10 ವರ್ಷದ ಹುಡುಗರಲ್ಲಿ ತುಂಬಾ ಶೋಚನೀಯ ಸ್ಥಿತಿ ಇರುವುದು ಸೂಚಿಸಿದೆ.

8. ಮಾನ್ಯ ಸಚಿವರು ಗದಗ ಜಿಲ್ಲೆಯ ಮಲ್ಲಸಂದ್ರ ಗ್ರಾಮದಲ್ಲಿ ತೀವ್ರತರವಾದ ಅಪೌಷ್ಟಿಕತೆಯ ನಿರ್ಮೂಲನೆಗೆ ತೆಗೆದುಕೊಂಡ ಕ್ಯಾಂಪ್ ಅಪ್ರೋಚ್ ವಿಧಾನವು ಸಕಾರತ್ಮಕವಾದ ಫಲಿತಾಂಶವನ್ನು ನೀಡಿರುವ ಬಗ್ಗೆ ಮಾಹಿತಿ ನೀಡಿದರು. ಈ ವಿಧಾನವನ್ನು ಪ್ರಾಯೋಗಿಕ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ಸಲಹೆ ನೀಡಿದರು. ಸಭೆಯು ಇಂತಹ ಮಧ್ಯಸ್ಥಿಕೆ ಕಾರ್ಯಕ್ರಮಗಳನ್ನು ಸಮಗ್ರವಾಗಿ ಮಾಡುವುದರ ಕುರಿತು ಪೌಷ್ಟಿಕ ಅಭಿಯಾನದಲ್ಲಿ ಕಾರ್ಯ ಯೋಜನೆಗಳನ್ನು ವಿನ್ಯಾಸಗೊಳಿಸಿ ಮುಂದಿನ ದಿನಗಳಲ್ಲಿ ಮಲ್ಟಿ-ಸೆಕ್ಟೋರಲ್ ಪೌಷ್ಟಿಕ ಅಭಿಯಾನದಡಿಯಲ್ಲಿ ಯೋಜನೆಗಳನ್ನು ರೂಪಿಸಬಹುದು ಎಂದರು.

9. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಮಾತನಾಡುತ್ತ ಇಲಾಖೆಯ ಐ.ಸಿ.ಡಿ.ಎಸ್. ಕಾರ್ಯಕ್ರಮದಡಿಯಲ್ಲಿ EDF ತಯಾರಿಕೆ ಮತ್ತು ಹಂಚಿಕೆಯನ್ನು ಮೂರು ವರ್ಷದ ಮಕ್ಕಳಿಗೆ ನೀಡಲಾಗುತ್ತದೆ. ಈ ಕಾರ್ಯಕ್ರಮವು ಕೆಲ ಪ್ರದೇಶಗಳನ್ನು ತುಂಬಾ ಯಶಸ್ವಿಯಾಗಿ ನಿರ್ವಹಿಸಲಾಗುತ್ತಿದೆ ಮತ್ತು ಕೆಲವೊಂದು ಪ್ರದೇಶಗಳಲ್ಲಿ ಕ್ಲಿಷ್ಟಕರವಾಗಿದೆ ಎಂದು ತಿಳಿಸಿದರು. ಹಾಗೆಯೇ ಸಚಿವರು ಮಾತನಾಡುತ್ತಾ ಸ್ವಸಹಾಯ ಸಂಘಗಳಿಗೆ ಉತ್ತಮ ತರಬೇತಿ ನೀಡಿದರೆ ಅವರ ಸಾಮರ್ಥ್ಯ ಕೂಡ ಹೆಚ್ಚಿ ಸ್ವತಂತ್ರವಾಗಿ ಪೌಷ್ಠಿಕ ಆಹಾರ ಘಟಕಗಳನ್ನು ಮುಂದುವರಿಸಬಹುದು ಮತ್ತು ಪೌಷ್ಠಿಕ ಆಹಾರವನ್ನು ವಯಸ್ಕರಿಗೂ ಮತ್ತು ಅನಾರೋಗ್ಯಕ್ಕೆ ತುತ್ತಾದವರಿಗೂ ಸಿಗುವಂತೆ ಮಾಡಬೇಕು ಎಂದು ತಿಳಿಸಿದರು. ಸಲಹೆಗಾರರು ಪ್ರತಿಕ್ರಿಯಿಸುತ್ತಾ ಈ ಪ್ರಾಯೋಗಿಕ ಯೋಜನೆಯಲ್ಲಿ ಸರ್ಕಾರೇತರ ಸಂಸ್ಥೆ ಪೌಷ್ಠಿಕ ಆಹಾರ ತಯಾರಿಕ ಘಟಕದ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ ಮತ್ತು ಸ್ವಸಹಾಯ ಸಂಘಗಳು ಪೌಷ್ಠಿಕ ಆಹಾರದ ಉತ್ಪಾದನೆ, ಪ್ಯಾಕಿಂಗ್, ಸಾರಿಗೆ ಮತ್ತು ಹಂಚಿಕೆಯಲ್ಲಿ ಪಾಲ್ಗೊಳ್ಳುತ್ತವೆ ಎಂದು ತಿಳಿಸಿದರು. ಹಾಗೆಯೇ ಈ ಯೋಜನೆಯು ಅನುಷ್ಠಾನಗೊಳ್ಳುತ್ತಿರುವ ತಾಲ್ಲೂಕುಗಳಲ್ಲಿ ಪಾಲ್ಗೊಳ್ಳಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಂಪನ್ಮೂಲ ಮತ್ತು ಸಹಕಾರ ತುಂಬಾ ಅವಶ್ಯವೆಂದು ತಿಳಿಸಿದರು.

10. ಅಭಿವೃದ್ಧಿ ಆಯುಕ್ತರು ಸದರಿ ಪ್ರಾಯೋಗಿಕ ಯೋಜನೆಯನ್ನು ಚಿಂಚೋಳಿ ಮತ್ತು ದೇವದುರ್ಗ ತಾಲ್ಲೂಕುಗಳನ್ನು ಹೇಗೆ ಆಯ್ಕೆ ಮಾಡಿದಿರಿ ಎಂದು ಕೇಳಿದರು. ಸಲಹೆಗಾರರು ಪ್ರತಿಕ್ರಿಯಿಸುತ್ತಾ ಆರೋಗ್ಯ ಇಲಾಖೆಯು ನೀಡಿದ ಅಂಶಗಳ ಆಧಾರಗಳ ಮೇಲೆ, ಸಚಿವ ಸಂಪುಟದ ಅನುಮೋದನೆಯೊಂದಿಗೆ ಆಯ್ಕೆ ಮಾಡಲಾಗಿದೆ ಎಂದರು.

11. ಅಭಿವೃದ್ಧಿ ಆಯುಕ್ತರು ಸಲಹೆ ನೀಡುತ್ತಾ ಹೆಚ್ಚಿನ ಸಂಖ್ಯೆಯ ಎ.ಪಿ.ಎಲ್. ಕುಟುಂಬಗಳಲ್ಲಿ ಕೂಡ ಅಪೌಷ್ಠಿಕತೆ ಹೆಚ್ಚಾಗಿ ಕಂಡುಬರುತ್ತದೆ. ಈ ಯೋಜನೆಯನ್ನು ಅವರಿಗೂ ವಿಸ್ತರಿಸುವ ಅವಶ್ಯಕತೆ ಇದೆ ಎಂದು ತಿಳಿಸಿದರು. ಸಲಹೆಗಾರರು ಪ್ರತಿಕ್ರಿಯಿಸುತ್ತಾ Energy Dense Food (EDF) ನ್ನು ಮಾತ್ರ ಬಿಪಿಎಲ್ ಕುಟುಂಬಕ್ಕೆ ನೀಡಲಾಗುತ್ತದೆ. ಉಳಿದಂತೆ ಸಮುದಾಯದ ಎಲ್ಲಾ ಜನರಿಗೂ ದೊರೆಯುವಂತೆ ಸ್ವಸಹಾಯ ಸಂಘಗಳ ಶಕ್ತಿವರ್ಧನೆ, ಅರಿವು, ತಿಳುವಳಿಕೆ ಮತ್ತು ಮಾಹಿತಿ, ಶಿಕ್ಷಣ, ಸಂಪರ್ಕ ಚಟುವಟಿಕೆಗಳನ್ನು ಮಾಡಲಾಗುತ್ತದೆ. ಕೆಲವು ಚರ್ಚೆಗಳ ನಂತರ EDF ಸಾಮಾನ್ಯ ಜನರಿಗೂ ದೊರೆಯುವಂತೆ ಮಾಡಲು ಸ್ವಸಹಾಯ ಸಂಘಗಳ ಮೂಲಕ ದೊರೆಯುವಂತೆ ಅವಕಾಶಗಳನ್ನು ನಿರ್ಮಿಸಲು ನಿರ್ಧರಿಸಿದರು. ಪ್ರಾಯೋಗಿಕ ಅಭಿಯಾನವು ಕಡಿಮೆ ಬೆಲೆಗೆ EDF ತಯಾರಿಸಿ ಸಾಮಾನ್ಯ ಜನರಿಗೂ ದೊರೆಯುವಂತೆ ಮಾಡುವ ಕಾರ್ಯತಂತ್ರಗಳನ್ನು ಮುಂದಿನ ದಿನಗಳಲಿ ್ಲರೂಪಿಸಬಹುದು. ಬಾಗಲಕೋಟೆ ಜಿಲ್ಲೆಯಲ್ಲಿ ಯೋಜನೆಯನ್ನು ನಿರ್ವಹಿಸಲು ಅವಕಾಶಗಳನ್ನು ಚರ್ಚಿಸಿದರು.

12. ಗ್ರಾಮ ಮಟ್ಟದಲ್ಲಿ ಗ್ರಾಮ ಪೌಷ್ಠಿಕ ಸ್ವಯಂ ಸೇವಕರುಗಳನ್ನು ವಿವಿಧ ಇಲಾಖೆ ಅಭಿವೃದ್ಧಿ ಕಾರ್ಯಕ್ರಮಗಳ ನಿರ್ದಿಷ್ಟವಾಗಿ, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಮತ್ತು ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ದಾಖಲಿಸುವ ಪ್ರಯತ್ನದ ಬಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಪ್ರಶಂಸಿಸಿದರು. ಸಲಹೆಗಾರರು ಪ್ರಾಯೋಗಿಕ ಯೋಜನೆಯಲ್ಲಿ ಬಳಸಲ್ಪಟ್ಟ, ಫಲಾನುಭವಿಗಳಿಂದ ಉಪಯೋಗಿಸಲ್ಪಟ್ಟ ಕಾರ್ಯಕ್ರಮದ ವಿವರಗಳನ್ನೊಳಗೊಂಡ ನ್ಯೂಟ್ರಿಷನ್/ಫಲಾನುಭವಿಗಳ ಕಾರ್ಡ್‌ಗಳನ್ನು ಸಚಿವರಿಗೆ ತೋರಿಸಿದರು.

13. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮತ್ತು ಅಭಿವೃದ್ಧಿ ಆಯುಕ್ತರು ಈ ಯೋಜನೆಯನ್ನು ಆದಷ್ಟು ಬೇಗ ಆರಂಭಿಸಲು ತಿಳಿಸಿದರು.

14. ಅಭಿಯಾನ ನಿರ್ದೇಶಕರು, ಸಂಜೀವಿನಿ–ಕೆ.ಎಸ್.ಆರ್.ಎಲ್.ಪಿ.ಎಸ್.ರವರು ವಿವರಿಸುತ್ತಾ ವಿಶ್ವಬ್ಯಾಂಕಿನ ನಿಯಮಾನುಸಾರ ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್ ಸಂಸ್ಥೆಯನ್ನು ಆಯ್ಕೆ ಮಾಡಲಾಗಿದೆ ಮತ್ತು ಈ ಸಂಸ್ಥೆಯು ತಾಂತ್ರಿಕ ಮತ್ತು ಹಣಕಾಸು ಮೌಲ್ಯಮಾಪನದಲ್ಲಿ ಅತ್ಯುತ್ತಮ ಶ್ರೇಣಿಯನ್ನು ಪಡೆದಿದ್ದು, ಈ ಎಲ್ಲಾ ಅಂಶಗಳನ್ನು ಅವಲೋಕಿಸಿ ವಿಶ್ವಬ್ಯಾಂಕ್ ಅನುಮೋದನೆಯನ್ನು ನೀಡಿದೆ. ಹಾಗೆಯೇ ಅಭಿಯಾನ ನಿರ್ದೇಶಕರು ಮಾತನಾಡುತ್ತಾ ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್ ಸಂಸ್ಥೆಯು ಉತ್ತಮ ಕಾರ್ಯಾನುಭವ (ಉತ್ತರ ಕರ್ನಾಟಕದಲ್ಲಿ ಆರೋಗ್ಯ ಕ್ಷೇತ್ರದಲ್ಲಿ) ಸಾಮರ್ಥ್ಯವನ್ನು ಹೊಂದಿದೆ ಎಂದು ತಿಳಿಸಿದರು.

15. ಉನ್ನತ ಮಟ್ಟದ ಸಮಿತಿಯು ಈ ಎಲ್ಲಾ ಅಂಶಗಳನ್ನು ಪರೀಕ್ಷಿಸಿದ ನಂತರ ಕರ್ನಾಟಕ ಮಲ್ಟಿ-ಸೆಕ್ಟೊರಲ್ ಪೌಷ್ಟಿಕತಾ ಪ್ರಾಯೋಗಿಕ ಯೋಜನೆಯನ್ನು ಅನುಷ್ಠಾನ ಮಾಡಲು ಆಯ್ಕೆಯಾಗಿರುವ ಕರ್ನಾಟಕ ಹೆಲ್ತ್ ಪ್ರಮೋಷನ್ ಟ್ರಸ್ಟ್ ಸಂಸ್ಥೆ ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯ ನಡುವಿನ ಒಪ್ಪಂದಕ್ಕೆ ಅನುಮೋದನೆ ನೀಡಿತು.

ಉನ್ನತ ಮಟ್ಟದ ಸಮಿತಿಯ ಎರಡನೆ ಸಭೆಯು ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

ಮಾನ್ಯ ಸಚಿವರು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು
ಅಧ್ಯಕ್ಷರು, ಉನ್ನತ ಮಟ್ಟದ ಸಮಿತಿ